


**ISSN Print:** 2394-7500
**ISSN Online:** 2394-5869
**Impact Factor:** 3.4
IJAR 2014; 1(1): 563-568
www.allresearchjournal.com
Received: 18-03-2014
Accepted: 25-04-2014

**ಡಾ. ಕೆ ರಾಮಕೃಷ್ಣಯ್ಯ**
ಪ್ರಾಧ್ಯಾಪಕರು,
ಪ್ರದರ್ಶನ ಕಲಾ ವಿಭಾಗ,
ಬೆಂಗಳೂರು
ವಿಶ್ವವಿದ್ಯಾಲಯ,
ಬೆಂಗಳೂರು, ಕರ್ನಾಟಕ,
ಭಾರತ

**Correspondence**
**ಡಾ. ಕೆ ರಾಮಕೃಷ್ಣಯ್ಯ**
ಪ್ರಾಧ್ಯಾಪಕರು,
ಪ್ರದರ್ಶನ ಕಲಾ ವಿಭಾಗ,
ಬೆಂಗಳೂರು
ವಿಶ್ವವಿದ್ಯಾಲಯ,
ಬೆಂಗಳೂರು, ಕರ್ನಾಟಕ,
ಭಾರತ

# ಚಂದ್ರಶೇಖರ ಕಂಬಾರರ ನಾಟಕಗಳಲ್ಲಿ ಸಾಮಾಜಿಕ ಮೌಲ್ಯಗಳು

## ಡಾ. ಕೆ ರಾಮಕೃಷ್ಣಯ್ಯ

**ಸಾರಲೇಖ:**
ಚಂದ್ರಶೇಖರ ಕಂಬಾರರು ಕನ್ನಡ ಸಾಹಿತ್ಯದ ನಾಟಕ ಚರಿತ್ರೆಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಆದರೆ ಅವರು ನಾಟಕ ಪರಂಪರೆಯಲ್ಲಿ ಒಂದು ಕ್ರಾಂತಿಯನ್ನೇ ಮಾಡಿದ್ದಾರೆ. ಅವರು ಭಾರತೀಯ ಬರವಣಿಗೆಗೆ ನೀಡಿರುವ ಮಹತ್ವದ ಕೊಡುಗೆ ಎಂದರೆ ಅವರ ಸಾಮಾಜಿಕ ಮೌಲ್ಯಗಳು. ಅವರು ಒಬ್ಬ ದೇಸಿ ಕಲ್ಪನೆಯಲ್ಲಿ ಅನೇಕ ಸಾಮಾಜಿಕ ನಾಟಕಗಳನ್ನು ರಚಿಸಿದ್ದಾರೆ. ಅವರ ಸಾಮಾಜಿಕ ಮೌಲ್ಯಗಳನ್ನು ವಿಶ್ಲೇಷಿಸುವುದು ಈ ಲೇಖನದ ಉದ್ದೇಶವಾಗಿದೆ.

**ಕೀವರ್ಡ್‌ಗಳು:** ಕನ್ನಡ ಸಾಹಿತ್ಯ, ಸಾಮಾಜಿಕ ಮೌಲ್ಯಗಳು, ಸಾಮಾಜಿಕ ನಾಟಕಗಳು

## ಪರಿಚಯ

ಚಂದ್ರಶೇಖರ ಕಂಬಾರರು ಆಧುನಿಕ ಕನ್ನಡ ನಾಟಕ ಪರಂಪರೆಯಲ್ಲಿ ನಾಟಕಗಳನ್ನು ಜಾನಪದದ ಹಿನ್ನೆಲೆಯಲ್ಲಿ ರಚನೆ ಮಾಡಿದಾರೆ. ತಮ್ಮ ನಾಟಕೀಯ ಅಭಿವ್ಯಕ್ತಿಗೆ ಕಂಬಾರರಂತೆ ಸಮಗ್ರವಾಗಿ ಜನಪದ ರಂಗಭೂಮಿಯನ್ನು ಬಳಸಿಕೊಂಡ ನವ್ಯ ನಾಟಕಕಾರರು ಬೇರೆ ಯಾರೂ ಇಲ್ಲ. ಆಧುನಿಕ ವಿಚಾರಗಳನ್ನು ಜಾನಪದ ಶೈಲಿಯಲ್ಲಿ ಸೆರೆ ಹಿಡಿದು ನಾಟಕವನ್ನು ರಚನೆ ಮಾಡುವುದು ವಿಶಿಷ್ಟವಾಗಿದೆ. ಇವರಿಗೆ ನಾಟ್ಯರಂಗ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ,(೧೯೭೫), ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ(೧೯೮೩), ವರ್ಧಮಾನ ಪ್ರಶಸ್ತಿ(೧೯೮೬), ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (೧೯೮೭), ಹಾಗೂ ಇತ್ತೀಚೆಗೆ ಸಿರಿಸಂಪಿಗೆ ನಾಟಕಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಹೀಗೆ ಹಲವಾರು ಪ್ರಶಸ್ತಿಗಳೊಂದಿಗೆ ಜ್ಞಾನಪೀಠ ಪ್ರಶಸ್ತಿಯೂ ದೊರೆತಿದೆ.

ಕಂಬಾರರ ನಾಟಕಗಳನ್ನು ಓದುವಾಗ ಅವುಗಳಲ್ಲಿ ಅಡಗಿರುವ ಆಂತರಿಕ ಕ್ರಿಯೆ ತಾನಾಗಿಯೇ ಕಣ್ಣಿಗೆ ಗೋಚರಿಸುತ್ತದೆ. ಇವರ ಪ್ರತಿಯೊಂದು ನಾಟಕವನ್ನು ರೀತಿ, ಭಾಷೆ, ಬಂಧ, ತಂತ್ರಗಳ ದೃಷ್ಟಿಯಿಂದ ನೋಡಿದಾಗ ಪ್ರತಿಯೊಂದು ನಾಟಕದಲ್ಲಿಯೂ ವಿಭಿನ್ನತೆ ಮತ್ತು ಸಾಮಾಜಿಕ ಮೌಲ್ಯಗಳು ಎದ್ದು ಕಾಣುತ್ತವೆ.

**ಕಂಬಾರರ ಸಾಮಾಜಿಕ ವಸ್ತುಪ್ರಧಾನ ನಾಟಕಗಳು**

ದೇಸೀಯ ನೆಲೆಯಲ್ಲಿ ಸಾಮಾಜಿಕ ವಸ್ತು ಪ್ರಧಾನ ಆಧುನಿಕ ನಾಟಕದ ವಸ್ತುವಿಗೆ ಸಂಬಂಧಿಸಿದಂತೆ ಪೌರಾಣಿಕ ವಸ್ತುವಿನಿಂದ ಸಾಮಾಜಿಕ ವಸ್ತುವಿನತ್ತ ಕ್ರಮಬದ್ಧವಾದ ಬೆಳವಣಿಗೆಯೊಂದನ್ನು ಎಲ್ಲ ದೇಶದ ರಂಗಭೂಮಿಯ ಇತಿಹಾಸದಲ್ಲಿಯೂ ಸ್ಪಷ್ಟವಾಗಿ ಗುರುತಿಸಬಹುದು. ಸಮಕಾಲೀನ ಸಾಮಾಜಿಕ ವಸ್ತುವನ್ನೊಳಗೊಂಡ ವಾಸ್ತವ ನಾಟಕಗಳು ಆಧುನಿಕ ಯುಗದ ಫಲವಾಗಿದ್ದು ಕನ್ನಡ ನಾಟಕದ ಇತಿಹಾಸವೂ ಇದಕ್ಕೆ ಹೊರತಲ್ಲ. ಆಧುನಿಕ ಶಿಕ್ಷಣ ಮತ್ತು ಪಾಶ್ಚಾತ್ಯ ಸಾಹಿತ್ಯ ಪರಿಚಯದಿಂದಾಗಿ ಮೂಲಭೂತ ಪರಿವರ್ತನೆಗೆ ಒಳಗಾದ ಭಾರತೀಯ ಸಮಾಜವನ್ನು ಪ್ರತಿಬಿಂಬಿಸುವ ಸಲುವಾಗಿಯೇ ಸಾಮಾಜಿಕ ನಾಟಕಗಳು ಹುಟ್ಟಿದವು. ಮಧ್ಯಮವರ್ಗದ ಜನಜೀವನವೇ ನಮ್ಮ ಸಾಮಾಜಿಕ ನಾಟಕಗಳಲ್ಲಿ ಕಾಣಿಸಿಕೊಂಡಿರುವದಕ್ಕೆ ಕಾರಣವನ್ನು ಈ ಹಿನ್ನೆಲೆಯಲ್ಲಿಯೇ ನೋಡಬಹುದು. ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದ ಇಂಗ್ಲೀಷ್ ಶಿಕ್ಷಣ ಪಡೆದ ಈ ಮಧ್ಯಮ ವರ್ಗದ ಜನ ಆಗಿನ ಕಾಲದಲ್ಲಿ ನಾಡಿನ ಭವಿಷ್ಯದ ಸೂತ್ರವನ್ನು ಹಿಡಿದಿದ್ದವರು; ಜನಸಾಮಾನ್ಯರಿಗೆ ಮೇಲ್ಪಂಕ್ತಿಯಾಗಿದ್ದು ಅವರ ಅಶೋತ್ತರಗಳನ್ನು ಪ್ರತಿನಿಧಿಸುತ್ತಿದ್ದವರು. ಭಾರತದ ನವೋದಯ ಚಳುವಳಿಗೆ ಕಾರಣವಾದ ಈ ವರ್ಗದಿಂದಲೇ ನಮ್ಮ ಬಹುಪಾಲು ಆಧುನಿಕ ಸಾಹಿತಿಗಳು ಹುಟ್ಟಿಕೊಂಡರು, ಈ ಸಾಹಿತಿಗಳಲ್ಲಿಯೇ ಚಂದ್ರಶೇಖರ ಕಂಬಾರರು ಪ್ರಮುಖರು. ಇವರು ತಮ್ಮ ನಾಟಕಗಳಲ್ಲಿ ಸಾಮಾಜಿಕ ವಸ್ತುವನ್ನು ಪ್ರಧಾನವಾಗಿಟ್ಟುಕೊಂಡು ದೇಸೀಯ ನೆಲೆಯಲ್ಲಿ ನಾಟಕಗಳನ್ನು ರಚನೆ ಮಾಡಿದರು ಅವುಗಳೆಂದರೆ:

**೧. ಕಾಡು ಕುದುರೆ:-** ಚಂದ್ರಶೇಖರ ಕಂಬಾರರು 'ಕಾಡುಕುದುರೆಯನ್ನು ಬರೆಯಬೇಕಾದರೆ ಇದಕ್ಕೆ ಮೂಲ ಪ್ರೇರಣೆ ಲೊರ್ಕಾ ಅವರ 'ದಿ ಹೌಸ್ ಆಫ್ ಬರ್ನಾಡ್ ಅಲ್ಲಾ' ಎಂಬ ನಾಟಕ. ಇದು ಲೊರ್ಕಾ ಅವರ ನಾಟಕದಿಂದ ಅದು ಯಾವುದೇ ದೃಷ್ಟಿಯಿಂದಲೂ ಮೂಲಕ್ಕೆ ಋಣಿಯಾಗುವ ತೊಂದರೆಯಿಂದ ಹೊರತಾಗಿದೆ. ದೇಸೀಯ ಪರಿಸರದಲ್ಲಿ ಜರಗುವ ಪ್ರೇಮಕಥೆಯೊಂದರ ನಾಟಕ ರೂಪವೇ 'ಕಾಡುಕುದುರೆ' ಆಗಿದೆ. ಸರ್ವೆಸಾಮಾನ್ಯವಾಗಿ ಕಂಬಾರರ ಬಹುಪಾಲು ಸಾಹಿತ್ಯದಲ್ಲಿ ಕಂಡುಬರುವುದು ಲೈಂಗಿಕ ಪ್ರತಿಮೆಗಳು. ಇದು ಕಾಡುಕುದುರೆಯಲ್ಲೂ ಕಂಡುಬರುತ್ತದೆ. ಕಂಬಾರರು ಇಲ್ಲಿ ಸ್ತ್ರೀ ಹಾಗೂ ಶಕ್ತಿಯ ಸಂಕೇತವಾಗಿ ಕಾಡುಕುದುರೆಯನ್ನು ಬಳಸಿಕೊಂಡಿದ್ದಾರೆ. ಈ ಕಾಡುಕುದುರೆ ಒರಟುತನದಿಂದ ಕೂಡಿದ್ದರೂ ಅಖಂಡ ಸೃಷ್ಟಿಯ ಶಕ್ತಿಯುತ ಕಾಮಕ್ಕೆ ಸಮರ್ಥವಾದ ಸಂಕೇತವಾಗಿದೆ. ಕಾಡುಕುದುರೆಯ ನಾಯಕ ಹುಲಿಗೊಂಡ. ಅವನೊಬ್ಬ ಕಡುಬಡವನಾಗಿ ಚಿತ್ರಿತನಾಗಿದ್ದಾನೆ. ಈ ನಾಟಕದಲ್ಲಿ ಚಂಪಿಯನ್ನು ಕಂಡು ಪ್ರೇಮಾಂಕುರಿಸಿದರೂ ಆರ್ಥಿಕ ಕಾರಣಗಳಿಂದಾಗಿ ಅವಳ ಅಕ್ಕ ಪಾರೋತಿಯನ್ನು ಮದುವೆಯಾಗುತ್ತಾನೆ. ಇವರ ಇನ್ನೊಬ್ಬ ಸೋದರಿಯಾದ ಶೀಲ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಹುಲಿಗೊಂಡನ ಸಂಪರ್ಕಕ್ಕಾಗಿ ಹಾತೊರೆಯುತ್ತಾಳೆ. ಆದರೆ ಕೊನೆಯಲ್ಲಿ ಹುಲಿಗೊಂಡ ತನ್ನನ್ನು ಆವರಿಸಿದ್ದ ಎಲ್ಲ ಬಂಧನಗಳನ್ನು ಜಾಡಿಸಿ ತನ್ನ ಸುಪ್ತ ಮನಸ್ಸಿನಲ್ಲಿ ಪ್ರೇಮದ ಧೂಳನ್ನೆಬ್ಬಿಸಿದ ಚಂಪಿಯೊಡನೆ ಸುಂದರ ಕನಸಿನ ಪ್ರಪಂಚದತ್ತ ದೌಡಾಯಿಸುವುದೇ ಕಾಡು ಕುದುರೆಯ ಕಥೆಯಾಗಿದೆ.

**ದೇಸೀಯ ಭಾಷೆ:-** ಕಾಡುಕುದುರೆಯು ಸಂಪೂರ್ಣವಾಗಿ ದೇಸೀಯ ಭಾಷಾ ಶೈಲಿಯನ್ನು ಒಳಗೊಂಡಿರುವಂತಹದು. "ಬೆಂಕಿಲ್ಲದೇ ಹೊಗಿ ಹೆಂಗ ಕಂಡೀತು? "ಕರದ ಹೆಣ್ಣ ಕೊಟ್ಟರೆ ಅಳಿಯಾಗ ಮಲರೋಗ ಬಂತಂತ" ಭಡವ, ಉಗುಳಿ, ಉಪ್ಪಹಾಕಿ ಹುರದಾಳು, ಬೋಸಡೆ, ಹಾಟ್ಯಾನ, ಹುಚ್ಚರಂಡೇ, ಕರುಳೇನೂ ಚುರ್ ಅನ್ನೋದಿಲ್ಲ, - ನಿನ್ನ ಕಣ್ಣೀರ ಕಂಡರೂ ಈ ರೀತಿಯಾಗಿ ಕಂಬಾರರು ನಾಟಕದ ಇಡೀ ಭಾಗದಲ್ಲಿ ದೇಸಿಯ ಭಾಷೆ ಮತ್ತು ಗಾದೆ, ಬೈಗಳು, ಒಗಟು, ಮುಂತಾದವುಗಳ ಸಮರ್ಥ ಪ್ರಯೋಗವನ್ನು ಮಾಡಿದ್ದಾರೆ.

ದೇಸೀಯ ನೆಲೆಯಲ್ಲಿಟ್ಟುಕೊಂಡು ನೋಡಿದರೂ "ಕಾಡು ಕುದುರೆ"ಯ ಸ್ವರೂಪ ಇನ್ನಷ್ಟು ದೂರ ಕೊಂಡೊಯ್ಯಬಹುದು. ಈ ನಾಟಕದಲ್ಲಿ ದುರ್ಗಿಯೊಬ್ಬಳ ಹೊರತಾಗಿ ಎಲ್ಲಾ ಪಾತ್ರಗಳು ಕಾಡುಕುದುರೆಗಳೇ. ಅವರೆಲ್ಲರಿಗೆ ಕ್ಷಣಚಿತ್ತ, ಕ್ಷಣಪಿತ್ತ. ಸ್ವಲ್ಪವೇ ವ್ಯತ್ಯಾಸವಾದರೂ ಹುಚ್ಚು ಕೆರಳಿದವರಂತೆ ಒಬ್ಬರನ್ನೊಬ್ಬರು ಚೂಪಾದ ಮಾತಿನಿಂದ ಚುಚ್ಚುತ್ತಾರೆ, ಜಗಳವಾಡುತ್ತಾರೆ, ಶಾಪ ಹಾಕುತ್ತಾರೆ, ದ್ವೇಷ ಸಾಧಿಸುತ್ತಾರೆ. ಒಬ್ಬೊಬ್ಬರ ಮನಸ್ಸು ಜ್ವಾಲೆಯ ಪರ್ವತವಿದ್ದಂತೆ. ಒಂದೇ ಕುಟುಂಬದಲ್ಲಿದ್ದೂ ಪರಸ್ಪರರ ಎದೆಯಲ್ಲಿ ಗಾಯಮಾಡಿ

ಹಿಂಸಿಸುತ್ತಾರೆ. ಸಿಕ್ಕದ ಹೆಣ್ಣಿಗಾಗಿ ಹಲಬುತ್ತ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಹುಲಿಗೊಂಡ ಕಾಡುಕುದುರೆಯಾಗುತ್ತಾನೆ. ತನ್ನ ಪಾಲಿನ ಗಂಡು ಅನ್ಯಾಯವಾಗಿ ಅಕ್ಕನ ಗಂಡನಾದುದನ್ನು ನೋಡಿ ಸಹಿಸಲಾರದೆ ಸಹಿಸುತ್ತ ವ್ಯವಸ್ಥೆಯ ನೈತಿಕತೆಯನ್ನು ಮಿರುವ ಚಂಪಿ ಕಾಡುಕುದುರೆಯಾಗುತ್ತಾಳೆ. ದಕ್ಕದ ಗಂಡನಿಗಾಗಿ ಪಾರೋತಿ ಮದುವೆಯ ಭಾಗ್ಯವಿಲ್ಲದೆ, ಸಿಕ್ಕ ಅವಕಾಶದಲ್ಲೇ ಸುಖವನ್ನು ದೋಚಬೇಕೆಂದ ಶೀಲಕ್ಕ, ಬಂದೂಕಿನ ಬಲವಿದ್ದೂ ತನ್ನ ನೆರಳಿನಲ್ಲೇ ತಾನು ಕಷ್ಟಪಟ್ಟು ಕಟ್ಟಿದ ವ್ಯವಸ್ಥೆ ಕುಸಿಯುತ್ತಿರುವುದನ್ನು ಕಂಡ ಗೌಡ್ತಿ, ನೈತಿಕತೆಯ ಹಂಗಿಲ್ಲದ ಕೊಮಾಲಿ ಇವರೆಲ್ಲರೂ ಕಾಡುಕುದುರೆಗಳಾಗುತ್ತಾರೆ. ಒಟ್ಟಾರೆಯಾಗಿ ಕಾಡುಕುದುರೆಯಲ್ಲಿ ಜನಪದರು ತಮ್ಮ ಬದುಕಿನಲ್ಲಿ ಯಾವ ರೀತಿಯಾದಂತಹ ಬದಲಾವಣೆಯನ್ನು ಕಂಡುಕೊಳ್ಳುತ್ತಾರೆ. ಮತ್ತು ಅವರು ಕಾಡುಕುದುರೆಯಾಗುವಂತಹ ಒಂದು ಘಟನೆಯನ್ನು ನೋಡಿದರೆ ಸಂಪೂರ್ಣ ದೇಸೀಯ ನೆಲೆಯಲ್ಲಿ ಸಂಪೂರ್ಣ ಮಾರ್ಪಡುವದು. ಈ ರೀತಿಯಾಗಿ ಸುಂದರ ಬದುಕಿನ ಸಂಕೀರ್ಣ ಸ್ಥಿತಿಯನ್ನು ಅನುಭವ ಪೂರ್ಣವಾಗಿಸುವಲ್ಲಿ ಕಾಡುಕುದುರೆ ಯಶಸ್ವಿಯಾಗುತ್ತದೆ. ಇದು ಚಲನಚಿತ್ರವಾಗಿಯೂ ಕಾಣಿಸಿಕೊಂಡಿದೆ.

**೨. ನಾಯೀಕತೆ:-**

ಚಂದ್ರಶೇಖರ ಕಂಬಾರರು ಸಾಮಾಜಿಕ ವಸ್ತುಪ್ರಧಾನವಾಗಿಟ್ಟುಕೊಂಡು ರಚನೆಮಾಡಿರುವ ನಾಟಕ "ನಾಯೀಕತೆ". ಈ ನಾಟಕದಲ್ಲಿ ಗ್ರಾಮೀಣ ಪರಿಸರದಲ್ಲಿನ ದೇಸೀಯ ಬದುಕನ್ನು ಅತ್ಯಂತ ಕುತೂಹಲಕಾರಿಯಾದ ರೀತಿಯಲ್ಲಿ ನಿರೂಪಿಸಿದ್ದಾರೆ. 'ನಾಯೀಕಥೆ'ಯ ನಾಯಕನಾದ ಸೋಮಣ್ಣ ಊರಿನಲ್ಲಿ ಶ್ರೀಮಂತ. ಆದರೆ ಸೊಕ್ಕಿನ ಮನುಷ್ಯನಾಗಿದ್ದನು. ಕಣ್ಣಿಗೆ ಕಂಡ ಸುಂದರ ಹೆಣ್ಣುಮಕ್ಕಳನ್ನು ಹಂಬಲಿಸುವನು. ಮದುವೆ ಮಾಡಿಕೊಂಡ ಹೆಂಡತಿಯ ಜೊತೆ ಬಾಳ್ವೆಯನ್ನು ಮಾಡಬೇಕಾದರೂ ಅವನ ಮನಸ್ಸು ಪರ ಸ್ತ್ರೀÀಯ ಮೇಲೆ ಚಂಚಲವಾಗಿರುತ್ತದೆ. ಹೆಂಡತಿಯನ್ನು ಕರೆದುಕೊಂಡು ಬರಲು ತವರಿಗೆ ಹೋಗುತ್ತಾನೆ. ದಾರಿಯಲ್ಲಿ ದಾಸರಾಟದ ತಂಡ ಸಿಗುತ್ತದೆ. ಈ ತಂಡದಲ್ಲಿರುವ ಶೃಂಗಾರದ ಹೆಣ್ಣು ಶಾರಿಗೆ ಮನಸೋತು ಆಕೆಯನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ನೀರಿನಂತೆ ಹಣ ಸುರಿಯಲು ಸಿದ್ಧನಾಗುತ್ತಾನೆ. ಆಕೆಯ ತಂದೆ-ತಾಯಿಯರಾದ ದಾಸ ಸಾವಂತ್ರಿಯರಿಗೆ ಹಣದಾಸೆ ತೋರಿಸಿ, ತನ್ನ ಪ್ರಯಾಣವನ್ನು ಮೊಟಕುಗೊಳಿಸಿ ಮರಳಿ ಊರಿಗೆ ಬಂದು ಅವರನ್ನು ತೋಟದಲ್ಲಿಡುತ್ತಾನೆ. ಆದರೆ ಶಾರಿಯು ಸೊಕ್ಕಿನ ಸೋಮಣ್ಣನನ್ನು ಹಾಗೂ ಹಣದಾಸೆಗಾಗಿ ತನ್ನನ್ನು ವಂಚಿಸಿದ ತಂದೆ-ತಾಯಿಗಳನ್ನು ಧಿಕ್ಕರಿಸಿ ಆಯುಷ್ಯವೆಲ್ಲ ಆಳಾಗಿ ಕೊಳೆಯಬೇಕಾಗಿದ್ದ, ನಾಯಿ ಮಗನಲ್ಲಿ ವ್ಯಕ್ತಿಸ್ವಾತಂತ್ರ್ಯಯ ಹಾಗೂ ಆದಮ್ಯ ಪ್ರೀತಿಯ ಸೆಲೆಯನ್ನು ಉಕ್ಕಿಸಿ ಅವನೊಂದಿಗೆ ಒಂದಾಗುವುದು ಈ ನಾಟಕದ ಸಂಕ್ಷಿಪ್ತ ವಿವರವಾಗಿದೆ. ಕಂಬಾರರು ತಮ್ಮ ನಾಟಕದ ಪ್ರಾರಂಭದಲ್ಲಿ ಪ್ರತಿಯೊಂದರಲ್ಲಿಯೂ ತಮ್ಮ ದೇಸೀಯ ನೆಲೆಯನ್ನು ಅಂದರೆ ಸಾವಳಗಿ ಶಿವಲಿಂಗನನ್ನು ಮತ್ತು ಭೂಸನೂರ ಮಠದ ಸಂಗಯ್ಯ ಸ್ವಾಮಿಗೆ ನೆನೆಯುತ್ತಾ ನಿಂತವರಿಗೆ ಕುಂತವರಿಗೆ, ಬಡವರಿಗೆ ಮತ್ತು ಶ್ರೀಮಂತರಿಗೆ ಶರಣು ಮಾಡುವದು ಕಂಬಾರರು ಪ್ರತಿಯೊಂದು ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ದೇಸಿ ಪರಿಸರದ ಬದುಕನ್ನು ಕಥಾವಸ್ತುವನ್ನಾಗಿಸಿಕೊಂಡ ಈ ನಾಟಕ ದಾಖಲೆಗಳಲ್ಲಿ ವಿಶಿಷ್ಟವಾದುದು. ಇಲ್ಲಿ ಪ್ರೇಮ ದೊಡ್ಡದೇ ಅಥವಾ ಹಣ ದೊಡ್ಡದೇ ಎಂಬ ಚರ್ಚೆಯಿಂದ ಪ್ರಾರಂಭವಾಗಿ ಕೊನೆಗೆ ಪ್ರೇಮವೇ ದೊಡ್ಡದೆಂದು ಸಾಬೀತು ಮಾಡಿ ತೋರಿಸುವರು. ಹಿಂದೆ ದಾಸರು ಬಯಲಾಟವನ್ನು ಪ್ರದರ್ಶಿಸುತ್ತಾ ಒಂದು ಪಾತ್ರದ ಪರಿಚಯವನ್ನು ಮಾಡಬೇಕಾದರೆ ಅವರ ಭಾಷಾ ಶೈಲಿ ದೇಸೀಯ ರೂಪದಲ್ಲಿದೆ. "ಸೋಳಾವರ್ಷದಾರೆ ಬತ್ತೀಸ ಲಕ್ಷಣದಾರೆ ಕೋಕಿಲಧಾಂಗ ಹಾಡುವಾಕಿ ನವಿಲಿನ್ಹಾಂಗ ಕುಣೀವಾಕಿ ನಿಂಬೀ ಹಣ್ಣಿನಾಂಗ ಹರೆ ತುಂಬಿಕೊಂಡಾಕಿ ಯೌವನ ತುಂಬಿ ಬಾಳೀ ಹಣ್ಣಿನ್ಹಾಂಗ ಬಾಗಿದಾಕಿ ಮಸದ ಕತ್ತಿ. ಹಾಕಿ ಎಳದರ ಹೊಟ್ಯಾಗಿನ ಕರಳ ಕಿತ್ತ ಹೊರಗ ಬರಬೇಕು". ಕಂಬಾರರ ಭಾಷೆಗೆ ಜನಪದದ ಸತ್ವ ತಾನೇ ತಾನಾಗಿ ಬೆರೆಯುತ್ತದೆ. ಕತೆಗಾರನು ಶಾರಿಯನ್ನು ವರ್ಣಿಸುವ ದಾಸ ಜನಾಂಗದ ನಂಬಿಕೆ ಜೀವನ – ದೃಷ್ಟಿಗಳ ಮೇಲೆ ಬೆಳಕು ಚೆಲ್ಲುವ ಅನೇಕ ಅಂಶಗಳು ಈ ನಾಟಕದಲ್ಲಿವೆ.

ದಾಸರ ಜನಾಂಗದಲ್ಲಿ "ದಾಸರ ಜಾತ್ಯಾಗ ಗರತೇರು ಇದ್ದುದ್ದನ್ನು ಹಿಂದೆ ಮುಂದೆ ಎಂದಾದರೂ ನೋಡಿದಿರೇನೆ? ದಾಸರ ಜಾತಿಯ ಹೆಣ್ಣುಗಳಿರುವದೇ ಮೇಲಿನವರನ್ನು ತೃಪ್ತಿಪಡಿಸಲು". ಇದು ಶೋಷಿತರ ಜನಾಂಗದಲ್ಲಿ ಕಂಡು ಬರುವ ಧ್ವನಿ. ಸಮಾಜದ ದೇಸಿ ಬದುಕಿನಲ್ಲಿಯ ಇಂತಹ ಕಹಿಯಾದ ಘಟನೆಗಳು ಉದ್ದೇಶ ಪೂರ್ವಕವಾಗಿ ಕಂಬಾರರು ಬದಲಾಗಬೇಕಾದ ಸಮಾಜಕ್ಕೆ ಎತ್ತಿ ತೋರಿಸಿದ್ದಾರೆ. ಪಾತ್ರಗಳ ಮೂಲಕ ಅವರ

ಅಪ್ರತಿಮ ದೇಸಿ ಪ್ರತಿಭೆಗೆ ಕನ್ನಡಿಯನ್ನು ಹಿಡಿಯುತ್ತವೆ. ಉಲ್ಲಾಸಕಾರಿಯಾದ ಸರಸಮಯ ಸಂಭಾಷಣೆಗಳು, ಭಾವಮಯ ದೇಸಿಹಾಡುಗಳು ಕ್ರಿಯಾಪೂರ್ಣ ವಸ್ತುರಚನೆಯಿಂದಾಗಿ ನಾಯೀಕಥೆ ಅತ್ಯಂತ ಯಶಸ್ವಿಯಾದ ನಾಟಕವಾಗಿದೆ.

**೩. ಬೆಪ್ತಕ್ಕಡಿ ಬೋಳೇಶಂಕರ:-** ಸಮಾಜದಲ್ಲಿ ಮುಗ್ಧಜನರನ್ನು ನಿಶ್ಚಲ ಮತ್ತು ನಿರಾಳವಾದ ಮನಸ್ಸನ್ನು ಹೊಂದಿದವರನ್ನು ಕಪಟ ಮನಸ್ಸಿನ ಮಾನವರು ಯಾವ ರೀತಿಯಾಗಿ ದುರ್ಬಳಕೆ ಮಾಡಿಕೊಳ್ಳುತ್ತಾರೆ ಎಂಬುದನ್ನು ಕಂಬಾರರ "ಬೆಪ್ತಕ್ಕಡಿ ಬೋಳೇಶಂಕರ " ನಾಟಕದಲ್ಲಿ ಉಲ್ಲೇಖಿಸವಾಗಿದೆ.

ಈ ನಾಟಕದಲ್ಲಿ ಮೂವರು ಅಣ್ಣತಮ್ಮಂದಿರು. ಹಿರಿಯರಿಬ್ಬರೂ ಜಾಣರು, ಮೂರನೆಯವನು ಬೋಳೇಶಂಕರ. ಅವನು ಮುಗ್ಧ, ಶ್ರಮಜೀವಿ. ಅಣ್ಣಂದಿರು (ಸೋಮಣ್ಣ ಮತ್ತು ಕಾಮಣ್ಣ) ಶ್ರಮಜೀವಿಯಾದ ಬೋಳೇಶಂಕರನಿಗೆ ನಿರುಪಯುಕ್ತ ಭೂಮಿ ಕೊಟ್ಟರೂ ಅವನು ಅದರಲ್ಲಿಯೇ ದುಡಿದು ತೃಪ್ತಿಯಿಂದಿರುವನು. ಈ ನಾಟಕವನ್ನು ಮುಂದುವರಿಸಲು ಪಿಶಾಚಿ – ೧-೨-೩ ಹಾಗೂ ಕೋಡಂಗಿ, ಸೈತಾನ, ಇವರನ್ನು ಕಂಬಾರರು ತಂತ್ರಕ್ಕಾಗಿ ವ್ಯವಸ್ಥಿತವಾಗಿ ಬಳಸಿಕೊಂಡಿದ್ದಾರೆ. ಇಂದಿನ ಯಾಂತ್ರಿಕ ಬದುಕಿನಲ್ಲಿ ಇಂತಹ ಪಿಶಾಚಿಗಳು ಸಾಕಷ್ಟಿದ್ದಾರೆನ್ನುವುದು ನಮಗೆ ಈ ಪಿಶಾಚಿಗಳ ಪಾತ್ರಗಳನ್ನು ನೋಡಿದಾಗ ಅರಿವಾಗುತ್ತದೆ. ಪಿಶಾಚಿಗಳ ಕುತಂತ್ರ ಬುದ್ದಿಯಿಂದ ಅವಿಶ್ವಾಸದ ಬೀಜ ಮೊಳೆಯುತ್ತದೆ ಸಹೋದರರಲ್ಲಿ ಮೊದಲಿನ ಇಬ್ಬರು ಸಹೋದರರು ರಾಜ್ಯ, ವ್ಯಾಪಾರ, ಹಣದ ದಾಹಕ್ಕೆ ಸಿಲುಕಿ ದಿವಾಳಿಯಾಗುತ್ತಾರೆ.

ಬೋಳೇಶಂಕರ ಮಾತ್ರ ಸರಳ ಹಾಗೂ ನಿರಾಡಂಬರ ಬದುಕಿನಿಂದ ಜೀವನ ಸಾಗಿಸುತ್ತಾನೆ. ಮುಂದೆ ಪಿಶಾಚಿಗಳ ನೆರವಿನಿಂದ ದೊರೆತ ಬೇರನ್ನು ಬಹುದಿನಗಳಿಂದ ಹೊಟ್ಟೆನೋವಿನಿಂದ ನರಳುತ್ತಿರುವ ರಾಜಕುಮಾರಿಗೆ ನೀಡಿದಾಗ ಹೊಟ್ಟೆ ನೋವು ಸಂಪೂರ್ಣವಾಗಿ ವಾಸಿಯಾಯಿತು. ಇದರಿಂದ ಸಂತೋಷಗೊಂಡ ರಾಜ ಈ ಮೊದಲೇ ಹೇಳಿದಂತೆ ತನ್ನೆಲ್ಲ ರಾಜ್ಯವನ್ನು ಬೋಳೇಶಂಕರನಿಗೆ ಅರ್ಪಿಸುವುದಲ್ಲದೆ ರಾಜಕುಮಾರಿಯನ್ನು ಕೂಡ ಅವನಿಗೆ ಧಾರೆಯೆರೆಯುತ್ತಾನೆ. ಈ ರೀತಿ ಆಕಸ್ಮಿಕವಾಗಿ ಬೋಳೇಶಂಕರ ರಾಜನಾದರೂ ತಾನು ಹಾಗೂ ತನ್ನ ರಾಜ್ಯದಲ್ಲಿರುವ ಎಲ್ಲಾ ಪ್ರಜೆಗಳಿಗೆ ದುಡಿದು ತಿನ್ನುವ ಕೆಲಸವನ್ನು ರೂಢಿಗೆ ತರುತ್ತಾನೆ. ಬೆಪ್ಪತಕ್ಕಡಿ ಬೋಳೇಶಂಕರ ನಾಟಕ ಬಸವಣ್ಣನವರ "ಕಾಯಕವೇ ಕೈಲಾಸ" ತತ್ವದ ಅಡಿಯಲ್ಲಿ ರಚಿತವಾಗಿರುವಂತಹ ನಾಟಕವಾಗಿದೆ. ಈ ನಾಟಕದಲ್ಲಿಯು ಕಂಬಾರರು ತಮ್ಮ ದೇಸಿನೆಲೆಯಾದ ಶಿವಪುರವನ್ನು ಕಥಾಭೂಮಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ನೀತಿಕಥೆಯೊಂದರಿಂದ ಸ್ಫೂರ್ತಿಗೊಂಡು ರಚಿತವಾಗಿರುವಂತಹ ಈ ನಾಟಕದ ಶೈಲಿಯು ಸಮಾಜದಲ್ಲಿ ಮುಗ್ಧ ಜನರನ್ನು ತುಳಿತಕ್ಕೆ ಒಳ ಮಾಡುವ ಅಲ್ಲಿರುವ ದೇಸಿ ಬದುಕನ್ನು ಕಂಬಾರರು ಸಂವಾದ ಶೈಲಿಯಲ್ಲಿ ಹೇಳಿದ್ದಾರೆ. ಸಂಬಂಧಗಳ ಬಲೆಯಲ್ಲಿ ಬೋಳೇಶಂಕರ ದೇಸೀಯ ಮೌಲ್ಯವನ್ನು ಹಿಡಿದಿಡುತ್ತಾನೆ.

"ನಗಬೇಕೋ ತಮ್ಮ ನಗಬೇಕೋ ನೀನು, ಹೂವಿನ ಹಾಗೇನೆ ನಗಬೇಕೋ, ಮುಳ್ಳು ಹಾಸಿಗೆ ಮ್ಯಾಲ ಮಲಗಿದ್ದರೂ ಚೆಂಗು ಲಾವಿ ಹೂವಿನ ನಗೆಯ ನಗಬೇಕೊ",

ಇದರಲ್ಲಿ ಲಾವಣಿ ದೇಸಿ ಛಂದೋರೂಪವು ವ್ಯಕ್ತವಾಗಿರುತ್ತದೆ. ಅಣ್ಣಂದಿರು ಅವನಿಗೆ (ಬೋಳೇಶಂಕರನಿಗೆ) ಮೋಸ ಮಾಡಿದರೂ ಅವನು ಅಣ್ಣಂದಿರನ್ನು ಹಾರೈಸುವ ಗುಣ ಮಾನವೀಯ ಗುಣ ಎತ್ತಿ ಹಿಡಿಯುವದು. ಆಧುನಿಕತೆಯ ಬಿರುಗಾಳಿಗೆ ಸಿಕ್ಕು ನಲುಗುತ್ತಿರುವ ಪರಂಪರಾಗತ ಮೌಲ್ಯಗಳನ್ನು ಪುನಃ ಸ್ಥಾಪಿಸುವ ಧೋರಣೆ ಈ ನಾಟಕದಲ್ಲಿದೆ.

ಕ್ಷಿಪ್ರ ಪ್ರಗತಿ ದುರಾಸೆ, ಸ್ವಾರ್ಥ, ಮೃಗಳ್ಳತನ, ಮತ್ಸರಗಳು ಕೈಗಾರಿಕೀರಣದ ಆನಂತರದ ಆಧುನಿಕ ಜೀವನದ ಬಳುವಳಿಗಳಾಗಿವೆ. ಅಭಿವೃದ್ದಿಯ ಗುಂಗಿನಲ್ಲಿರುವ ಸಮಾಜಕ್ಕೆ ಇವೆಲ್ಲ ಸಹಜವೆನಿಸಿದಾಗ ಆಧುನಿಕ ಪೂರ್ವ - ನೆಮ್ಮದಿಯ ಬದುಕಿನ ಆಕಾರಗಳನ್ನು ನೆನಪಿಸಿಕೊಡಲು ಈ ನಾಟಕ ಪ್ರಯತ್ನಿಸುತ್ತದೆ. ದುಡಿಮೆಯನ್ನು ನಮ್ಮವರು ದೇವರಿಗೆ ಸಮಾನವಾಗಿ ಗೌರವಿಸಿದವರೂ ಪ್ರಾಮಾಣಿಕ ದುಡಿಮೆಯಿಂದ ಲಭ್ಯವಾಗುವ ಸಂಪತ್ತನ್ನು ಹಂಚಿಕೊಂಡು ಉಣ್ಣುತ್ತ ಸರಳತೆಯಿಂದ ಬದುಕಿದ ಪರಂಪರಾಗತ ಜೀವನ ಶೈಲಿಗೆ ಆಧುನಿಕ ಜೀವನ ಕ್ರಮಗಳು ಆಘಾತವನ್ನುಂಟುಮಾಡುತ್ತವೆ. ಸಾಕ್ಷರನಲ್ಲದ ಮುಗ್ಧ ಬೋಳೇಶಂಕರನಲ್ಲಿ ಜೀವನ ಮೌಲ್ಯಗಳು ಘನೀಕೃತಗೊಂಡಿವೆ.

ಪಿಶಾಚಿ ತಲೆಯಿಂದ ಕೆಲಸ ಮಾಡುವುದನ್ನು ಪ್ರತಿಪಾದಿಸಿದರೆ ಬೋಳೇಶಂಕರನು "ತಲೆಯಿಂದ ಕೆಲಸ ಮಾಡಿದರೆ ತಲೆ ಸಿಡಿಯುತ್ತದೆ. ಆದ್ದರಿಂದ ನಾವು ಮೊದಲಿನ ಹಾಗೆ ಕೈ ಮತ್ತು ಬೆನ್ನುಗಳಿಂದ ಕೆಲಸ ಮಾಡೋದೇ ವಾಸಿ, ಎಂದು ಹೇಳಿ ದೇಸಿ ಶ್ರಮ ಸಂಸ್ಕೃತಿಯನ್ನು ಸಮರ್ಥಿಸಿಕೊಳ್ಳುತ್ತಾನೆ.

ಈ ನಾಟಕದಲ್ಲಿ ಆಧುನಿಕತೆ ಕೈಗಾರಿಕೀರಣ ಬೌದ್ಧಿಕ ಶ್ರಮ ಇವುಗಳ ನಿರಾಕರಣೆ ಅಧಿಕವಾಗಿರುವುದರಿಂದ ಕಂಬಾರರು ಆಧುನಿಕತೆಯ ವಿರೋಧಿಯಾದ ಪ್ರತಿಗಾಮಿ ಮನೋಭಾವದವರು ಎನಿಸುವುದು ಸಹಜ. ಯಾರನ್ನೂ ಕೇಳದೆ ಯಾರಿಗಾಗಿಯೂ ಕಾಯದೆ ವೇಗದಿಂದ ಆಗಮಿಸಿ ಆಕ್ರಮಿಸಿಕೊಳ್ಳುತ್ತಿರುವ ಆಧುನಿಕತೆಯ ಸಂಭ್ರಮದ ಮಧ್ಯೆ ಪರಂಪರಾಗತ ದೇಸಿ ಮೌಲ್ಯಗಳು ಅನಾಥವಾಗಬಾರದೆಂಬ ಕಾಳಜಿ ಕಂಬಾರ ರಲ್ಲಿ ತೀವ್ರವಾಗಿದೆ.

**೪. ತುಕ್ರನ ಕನಸ್ಸು:-** ಕಂಬಾರರು ಸಾಮಾಜಿಕ ಜೀವನದಲ್ಲಿ ವ್ಯಕ್ತಿಯೊಬ್ಬನು ತಾನೊಬ್ಬ ಸಾಮಾನ್ಯ ವ್ಯಕ್ತಿಯಾದರೂ ಅವನು ಸಮಾಜದಲ್ಲಿ ಮತ್ತು ಇತಿಹಾಸದಲ್ಲಿ ತನ್ನ ಹೆಸರು ಚಿರಋಣಿಯಾಗಿ ಉಳಿಯಬೇಕು ಎಂಬ ದೃಷ್ಟಿಯಿಂದ ಏನೆಲ್ಲ ಪ್ರಯತ್ನ ಮಾಡುತ್ತಾನೆ ಎಂಬುದನ್ನು ಈ ನಾಟಕದ ಮೂಲಕ ತಿಳಿಸುತ್ತಾರೆ. ಈ ನಾಟಕವು "ಸ್ವಾತಂತ್ರತ ಯ ಪೂರ್ವ ಚೀನಾದ ಸಂದರ್ಭದಲ್ಲಿ ಸೃಷ್ಟಿಯಾದ 'ಲುಷು'ನ ಪ್ರಸಿದ್ಧ ಕತೆಯನ್ನು ಖಚಿತವಾದ ಮೂಲಸಾಮಗ್ರಿಯಾಗಿ ಬಳಸಿಕೊಂಡು ಈ ಕೃತಿ ರೂಪಾಂತರವೆAಬ ಶಬ್ದವನ್ನು ಮೀರಿ ಸ್ವತಂತ್ರ ಸೃಷ್ಟಿಯಾಗುವ ಯಶಸ್ಸನ್ನು ಸಾಧಿಸಿಕೊಂಡಿದೆ.

ಈ ನಾಟಕದ 'ತುಕ್ರ' ಒಬ್ಬ ಸಾಮಾನ್ಯ ವ್ಯಕ್ತಿ. ಅವನು ತನ್ನ ಹೆಸರನ್ನು ಇತಿಹಾಸದಲ್ಲಿ ದಾಖಲುಗೊಳಿಸಲು ನಡೆಸುವ ಪ್ರಯತ್ನ ಕಾಣುವ ಕನಸುಗಳು, ವಿವಿಧ ಹಂಬಲಗಳು ಸಾರ್ವತ್ರಿಕವಾದವು. ಈ ನಾಟಕದಲ್ಲಿ ಪಾದ್ರಿ – ರಂಗಿಯರ ಸಂಬಂಧವನ್ನು ಬಹಿರಂಗಗೊಳಿಸಿದಾಗ ರಂಗಿ ತುಕ್ರನ ಕೆನ್ನೆಗೆ ಹೊಡೆಯುತ್ತಾಳೆ. ಪಟೇಲನಿಗೂ ತಾರಾ ಮೇಡಂಗೂ ಸಂಬಂಧವಿರುತ್ತದೆ. ಪಟೇಲ ಮಾಡಿದ ರಹಸ್ಯ ಸ್ಥಳದಲ್ಲಿ ಪಟೇಲನ ಬದಲು ತುಕ್ರ ತಾನೇ ಹೋಗಿ ಕೂಡುತ್ತಾನೆ. ಅದು ತಾರಾಗೆ ಗೊತ್ತಾಗಿ ಅರಚುವಳು. ಜನ ಸೇರಿ ತುಕ್ರನನ್ನು ಥಳಿಸುವರು. ನ್ಯಾಯ ನೀತಿ ಹೊರಟು ಹೋಗಿದೆ. ನಾನಿನ್ನು ಇರಬಾರದೆಂದು ತುಕ್ರ ಸಾಯಲು ನಿರ್ಧರಿಸಿ ಸಿಂಗ್ರನಿಗೆ ಗೋರಿ ತೋಡಲು ಹೇಳುವನು. ಸತ್ತವನಂತೆ ಗೋರಿಯಲ್ಲಿಳಿದು ಮತ್ತೆ ಎದ್ದು ಬಂದು ಆಶಾವಾದಿಯಾಗಿ ಬೆಂಗಳೂರಿಗೆ ಹೊರಡುವವನು ನಾಟಕದ ಉತ್ತರಾರ್ಧದಲ್ಲಿ ತುಕ್ರನು ನಗರ ಜೀವನವನ್ನು ಆಡಂಬರಗಳನ್ನು ಮೈಗೂಡಿಸಿಕೊಂಡ ನವನಾಗರಿಕನಂತೆ ಗೋಚರಿಸುತ್ತಾನೆ. ಇಲ್ಲಿ ಚಿತ್ರಿತವಾದ ತುಕ್ರ ಆದಿ, ಮಧ್ಯ, ಅಂತ್ಯಗಳ ತಾರ್ಕಿಕತೆಯೇ ಇಲ್ಲದ ವ್ಯಕ್ತಿ. ಈತನ ಬಾಳಿನಲ್ಲಿ ಬರುವುದು ಕೇವಲ ಪ್ರಸಂಗಗಳು ಮಾತ್ರ. ಈ ಪ್ರಸಂಗ ಗಳೆಲ್ಲ ತುಕ್ರ ತನ್ನ ಸುತ್ತಲಿರುವ ಸಮಾಜವನ್ನು ಗೆಲ್ಲಲಿಕ್ಕಾಗಿ ನಡೆಸುವ ದಿಗ್ವಿಜಯಗಳು. ತುಕ್ರನನ್ನು ಸಮಾಜ ನಿಕೃಷ್ಟವಾಗಿ ಕಾಣುತ್ತಿದ್ದರೂ ದೇಶದ ಮೂಲ ಘಟಕವಾಗಿರುವ ಅವನಂಥವರೇ ನಿಜವಾದ ಪ್ರಜೆಗಳೆನಿಸಿದ್ದಾರೆ. ದೇಶದ ಅನಾರೋಗ್ಯದ ಬಗ್ಗೆ ಚಿಂತಿಸುತ್ತಾ ಸುಂದರ ಭವಿಷ್ಯದ ಕನಸ್ಸು ಕಾಣುವ ಆಶಾವಾದಿಗಳಾಗಿದ್ದಾರೆ. "ಕೇಳೆನ್ನ ದೇಶವೆ ಉನ್ಮಾದ ಬದುಕಲ್ಲ. ಮಾಯಾ ಬಜಾರಿನಲ್ಲಿ ಬೆಳೆಯಲಾರಿ ಆಸ್ಪತ್ರೆಯಿಂದೋಡಿ ಹೊರಗೆ ಬಾಗಾಳಿಯಿದೆ. ಬೆಳಕು ಇದೆ ತುಕ್ರನೂ ಇಲ್ಲೆ ಇರುವೆ "ಇದು ದೇಶಕ್ಕೆ ತುಕ್ರನ ಕರೆ. ಭ್ರಷ್ಟ ರಾಜಕರಣಿಗಳು ಮತ್ತು ಅವರನ್ನು ಓಲೈಸುವ ಮೂರ್ಖ ಅಧಿಕಾರ ಶಾಹಿ ದೇಶದ ವಾಸ್ತವ ಸ್ಥಿತಿಯನ್ನು ಮರೆಮಾಡಿ ಕೃತಕ ಸಮೃದ್ಧಿಯ ಭ್ರಮಾತ್ಮಕ ವಾತಾವರಣ ನಿರ್ಮಿಸಿದ್ದಾರೆ. ಅದು ಅನಾರೋಗ್ಯಕರವಾದ ವಾತಾವರಣ. ಅದರಿಂದ ಹೊರಗೆ ಬಂದಾಗ ಮಾತ್ರ ದೇಶಕ್ಕೆ ತುಕ್ರನಂಥ ಮುಗ್ಧ ದೇಶಪ್ರೇಮಿಗಳು ಕಂಡರು ಅವರ ಸುಖದುಃಖದ ಅರಿವಾದಿತೇಂಬುದು ತುಕ್ರನ ಹಂಬಲವಾಗಿದೆ".

ಈ ನಾಟಕ ದೇಸಿ ಸತ್ವಗಳನ್ನು ಬಳಸಿಕೊಂಡು ದೇಸೀಯವಾಗಿ ಉಳಿದಿಲ್ಲ. ಸಂಪೂರ್ಣವಾಗಿ ಒಂದು ಆಧುನಿಕ ನಾಟಕವಾಗಿ ರೂಪಗೊಂಡಿದೆ. ಈ ನಾಟಕದ ದೇಶ – ಕಾಲಗಳೂ ಇದಕ್ಕೆ ಸಾಮಾಜಿಕ ಐತಿಹಾಸಿಕ ಸಂದರ್ಭವನ್ನು ಒದಗಿಸಿಕೊಟ್ಟಿವೆ. ಕಂಬಾರರು ಸಾಮಾಜಿಕ ವಸ್ತುವನ್ನು ಪ್ರಧಾನವಾಗಿಟ್ಟುಕೊಂಡು ಪ್ರಾದೇಶಿಕ ವಸ್ತು, ನಗರದ ಮಧ್ಯಮ ವರ್ಗದ ಸಮಸ್ಯೆಗಳನ್ನು ಪ್ರತಿಬಿಂಬಿಸಿದ್ದಾರೆ. ವರ್ಣಭೇದ, ಬಡವ- ಶ್ರೀಮಂತರ ನಡುವಿನ ವ್ಯತ್ಯಾಸಗಳನ್ನು ಇಲ್ಲಿ ಸ್ಥೂಲವಾಗಿ ಪರೀಕ್ಷಿಸಲಾಗಿದೆ. ಆರ್ಥಿಕ ಶೋಷಣೆಗೂ ಸಾಮಾಜಿಕ ತಾರತಮ್ಯಗಳಿಗೂ ಇರುವ ಸಂಬಂಧವನ್ನು ಸ್ಪಷ್ಟವಾಗಿ ತೋರಿಸುವ ಮೂಲಕ ತಮ್ಮ ನಾಟಕಗಳಲ್ಲಿ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯಲು ಪ್ರಯತ್ನ ಮಾಡಿದ್ದಾರೆ.

## ಆಧಾರ ಗ್ರಂಥಗಳು


1. ಕೆ.ಮರಳುಸಿದ್ದಪ್ಪ, ಆಧುನಿಕ ಕನ್ನಡ ನಾಟಕ, ಅಂಕಿತ ಪುಸ್ತಕ, ಬೆಂಗಳೂರು ೧೯೮೩
2. ನಾಗಭೂಷಣ ಒ.ಎಲ್, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೪
3. ಮಲಶೆಟ್ಟಿ ಬಸವರಾಜ, ಚಂದ್ರಶೇಖರ

ಕಂಬಾರ, ನವಕರ್ನಾಟಕ ಸಾಹಿತ್ಯ ಸಂಪದ, ಬೆಂಗಳೂರು, ೨೦೦೬

4. ಅಶೋಕ ಟಿ.ಪಿ, ತುಕ್ರನ ಕನಸು, ಅಕ್ಷರ ಪ್ರಕಾಶನ, ಶಿವಮೊಗ್ಗ, ೧೯೯೨
5. ಕಂಬಾರ ಚಂದ್ರಶೇಖರ, ನಾಯಿಕತೆ
6. ಕಂಬಾರ ಚಂದ್ರಶೇಖರ, ಬೆಪ್ಪುತಕ್ಕಡಿ ಬೋಳೇಶಂಕರ, ಅಂಕಿತ ಪುಸ್ತಕ, ಬೆಂಗಳೂರು.